ಲಕ್ಷ ನಗದು. ಜೊತೆಗೆ ಡಿಸೋಜ, ನೀವ್ ಈ ಸಂಜೆ ಹೇಳ್ದ ಮಾಹಿತಿ. ಚಿಪ್ಪಣ್ಣನ ಮನೆಯ ಹೊರಗಡೆ ಹಳೆಯ ಚಪ್ಪಲಿಗಳಿದ್ದವು. ಅವನ್ನು ಮೂಸಿ ನೋಡಿದ ನಾಯಿ, ದೇವಸ್ಥಾನದವರೆಗೂ ಹೋಗಿದೆ ಅಂದದ್ದು. ಇವೆಲ್ಲವೂ ಇವರೆಡಕ್ಕೂ ನಂಟು ಇರುವುದನ್ನು ತೋರುತ್ತಿತ್ತು. ಪಳನಿ, ಬಾದಾಮಿ ಪ್ಲಾನು ಬದಲಾಯಿಸಿ ಮನೆಯೊಳಕ್ಕೆ ಹೋದ ಅಂದಿಯಲ್ಲ. ಪ್ರಾಯಶಃ ಅದು ಹೀಗಿರಬೇಕು. ಬಾದಾಮಿ ಹಣ ನೀಡಿಯೇ, ಚಿಪ್ ತೆಗೆದುಕೊಂಡು ಹೋಗಿದ್ದಾನೆ. ಚಿಪ್ಪಣ್ಣ ಹಣ ಸಿಗುವ ವಿಚಾರವನ್ನು ನಿನಗೆ ಹೇಳಿಲ್ಲ." ಕರಮಚಂದ ವಿವರಿಸಿದ.

"ಹಾಗಿದ್ರೆ ಷೋರೂಮಿನವರು ಬಹುಮಾನಕ್ಕಾಗಿ ಕದ್ದದ್ದಲ್ಲ!" ನಿರಾಶೆಯಲ್ಲಿ ಉಸುರಿದೆ.

"ಬಿದ್ದಪ್ಪ, ಆ ಬಹುಮಾನ ಯೋಜನೆ ಮುಖ್ಯ ನಗರಗಳಿಗಷ್ಟೇ ಸೀಮಿತ. ಇಲ್ಲಿ ಆ ಯೋಜನೆ ಇಲ್ಲ. ಹಾಗಾಗಿ ಯಾವ ಷೋರೂಮಿನವರೂ ಅದನ್ನು ಹೇಳಿಲ್ಲ. ಡಿಸೋಜ, ಚಿಪ್ಪಣ್ಣನ ಮೊಬೈಲ್ ಕರೆವಿವರದಲ್ಲಿ ಪಳನಿಯ ಅಥವಾ ಬಾದಾಮಿಯ ಕರೆಗಳು ಕಂಡಿಲ್ಲವೇ?"

"ನಾವು ಆ ಬಗ್ಗೆ ಜಾಗ್ರತೆ ಮಾಡಿದ್ದೆವು. ಚಿಪ್ಪಣ್ಣನಿಗೆ ನಾನು ಇತ್ತೀಚೆಗೆ ನನ್ನ ಫೋನಿಂದ ಕರೆ ಮಾಡಿದ್ದೇ ಇಲ್ಲ. ಬಾದಾಮಿಯೂ ಕರೆ ಮಾಡಿಲ್ಲ. ಬಹುಶಃ ಚಿಪ್ಪಣ್ಣನ ಬಾಸ್ಗೆ ಆತ ಕರೆ ಮಾಡ್ತಿದ್ದಿರಬೇಕು. ಬಾದಾಮಿ ಬರುವ ಬಗ್ಗೆ ಬಾಸ್ ತನ್ಗೆ ಹೇಳಿದ್ದು ಅಂತ ಚಿಪ್ಪಣ್ಣ ಹೇಳಿದ್ದ." ಕರಮಚಂದನ ಪ್ರಶ್ನೆಗೆ ಪಳನಿಯೇ ಉತ್ತರಿಸಿ, ಗಟ್ಟಿಯಾಗಿ ನಕ್ಕು ಮುಂದುವರೆಸಿದ,

"ಸಾರ್, ಕೋರ್ಟ್‌ನಲ್ಲಿ ನಾನು ಕೊಲೆ ಮಾಡಿದ್ದು ಅಂತ ಒಪ್ಪಿಕೊಳ್ಳೋಲ್ಲ. ನನ್ನ ಮೇಲೆ ಕೊಲೆ ಆರೋಪ ಹೊರಿಸಲು ನಿಮ್ಮಲ್ಲಿ ಏನೂ ಸಾಕ್ಷಿ ಇಲ್ಲ!"

"ಸಾಕಷ್ಟು ಸಾಕ್ಷಿಗಳಿವೆ. ನಿನ್ನ ಹೇಳಿಕೆಯನ್ನು ನಾನು ರೆಕಾರ್ಡ್ ಮಾಡಿದ್ದೀನಿ. ಈ ಶೂವನ್ನು ಕದಿಯೋಕೆ ನೀನು ಬಂದಿದ್ದು, ನಿನ್ನಲ್ಲಿರೋ ಜಿಪಿಎಸ್ ಟ್ರಾಕರ್, ಶೂನಲ್ಲಿದ್ದ ಜಿಪಿಎಸ್, ಚಿಪ್! ಇಷ್ಟು ಸಾಕಲ್ಲವೇ? ಚಿಪ್ಪಣ್ಣನೇ ಚಿಪ್ ತಂದಿದ್ದನ್ನು ಬಾದಾಮಿ ಹೇಳ್ತಾನೆ."

ಅಷ್ಟು ಹೇಳಿದಾಗ, ಪಳನಿ ತೆಪ್ಪಗಾದ.

"ಡಿಸೋಜ, ಈ ಪ್ರಕರಣ ಇಲ್ಲಿಗೇ ಮುಗಿಯೋಲ್ಲ. ನೀವು ಚಿಪ್ಪಣ್ಣನ ಮೇಲಧಿಕಾರಿಯನ್ನು ಹಿಡಿಯಬೇಕು. ಡಿಫೆನ್ಸ್ ವಿಚಾರ ಅಂದ್ರೆ ಎನ್.ಐ.ಎ ಬರಬೇಕಾದೀತು."

"ಹೌದು, ಈ ಪ್ರಕರಣವನ್ನ ಅವರಿಗೇ ಒಪ್ಪಿಸಿಬಿಡ್ತೀನಿ. ನಮ್ಗೆ ತಲೆ ನೋವು ಕಮ್ಮಿಯಾಗುತ್ತೆ!" ಉದ್ಗಾರ ತೆಗೆದ ಡಿಸೋಜ.

## ರವಿರಾಜ ಬೈಕಂಪಾಡಿ

ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಅವರ ಮೊದಲ ಪತ್ತೆದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರ ಪತ್ರಿಕೆಯಲ್ಲಿ. ಪತ್ತೆದಾರಿ ಕಿರುಕಾದಂಬರಿ 'ಅದಲು–ಬದಲು' ವಾರ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ವಿವಿಧ ಪತ್ರಿಕೆಗಳಲ್ಲಿ ಕತೆ–ನೀಳ್ಗತೆಗಳೂ ಪ್ರಕಟಗೊಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.